# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 899 |
| 2 | ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 24.02.2022 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಪ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ದಿನಾಂಕ:31.01.2022ಕ್ಕೆ ಇದ್ದಂತೆ ಪೊಲೀಸ್ ಇಲಾಖೆಯಲ್ಲಿನ ನೌಕರರ ಮಂಜೂರಾತಿ ಸಂಖ್ಯೆ ಎಷ್ಟು; (ವಿವರ ನೀಡುವುದು) | ದಿನಾಂಕ: 31.01.2022ರ ಅಂತ್ಯಕ್ಕೆ ಪೊಲೀಸ್ ಇಲಾಖೆಯಲ್ಲಿನ ಬಲಾಬಲದ ಮಾಹಿತಿಯನ್ನು ಅನುಬಂಧ–ಅ ರಲ್ಲಿ ನೀಡಲಾಗಿದೆ. |
| ಆ | ದಿನಾಂಕ:31.01.2022ಕ್ಕೆ ಇದ್ದಂತೆ ಪೊಲೀಸ್ ಇಲಾಖೆಯಲ್ಲಿನ ನೌಕರರ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು; (ಎ.ಬಿ.ಸಿ.ಡಿ ದರ್ಜೆಯ ವಿವರ ನೀಡುವುದು) | |
| ಇ | ರಾಜ್ಯ ಸರ್ಕಾರದಲ್ಲಿ ದಿನಾಂಕ:31.01.2022ಕ್ಕೆ ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ, ದ್ವಿತೀಯ ದರ್ಜೆ, ಸಹಾಯಕ ನೌಕರರ ಮತ್ತ ಡಿ ದರ್ಜೆ ನೌಕರರ ಮಂಜೂರಾತಿ ಸಂಖ್ಯೆ, ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; | ಪೊಲೀಸ್ ಇಲಾಖೆಯಲ್ಲಿನ ದಿನಾಂಕ:31.01.2022ರ ಅಂತ್ಯಕ್ಕೆ ಪ್ರಥಮ ದರ್ಜೆ, ದ್ವಿತೀಯ ದರ್ಜೆ, ಸಹಾಯಕ ನೌಕರರ ಮತ್ತ ಡಿ ದರ್ಜೆ ನೌಕರರ ಬಲಾಬಲದ ಮಾಹಿತಿಯನ್ನು ಅನುಬಂಧ–ಆ ರಲ್ಲಿ ನೀಡಲಾಗಿದೆ. |
| ಈ | ಪ್ರಸ್ತುತ ಕಾರ್ಯನಿರ್ವಹಿಸುತ್ತರುವ ಪ್ರಥಮ ದರ್ಜೆ, ದ್ವಿತೀಯ ದರ್ಜೆ, ಸಹಾಯಕ ನೌಕರರ ಮತ್ತ ಡಿ ದರ್ಜೆ ನೌಕರರ ಮಂಜೂರಾತಿ ಸಂಖ್ಯೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು) | ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ, ದ್ವಿತೀಯ ದರ್ಜೆ, ಸಹಾಯಕ ನೌಕರರ ಮತ್ತ ಡಿ ದರ್ಜೆ ನೌಕರರ ಮಂಜೂರಾತಿ ಸಂಖ್ಯೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರವನ್ನು ಅನುಬಂಧ–ಇ ರಲ್ಲಿ ನೀಡಲಾಗಿದೆ. |
| ಉ | ಕನಿಷ್ಠ 1 ವರ್ಷ, 5 ವರ್ಷ, 6 ವರ್ಷ ಮತ್ತು 10 ವರ್ಷ ಸೇವೆಯಲ್ಲಿರುವ ನೌಕರರು (ಎ.ಬಿ.ಸಿ.ಡಿ ದರ್ಜೆವಾರು) ಮೃತಪಟ್ಟಲ್ಲಿ ಸರ್ಕಾರದಿಂದ ಸಿಗುವ ಗರಿಷ್ಠ ಆರ್ಥಿಕ ಸೌಲಭ್ಯಗಳು ಎಷ್ಟು? | ಕನಿಷ್ಠ 1 ವರ್ಷ, 5 ವರ್ಷ, 6 ವರ್ಷ ಮತ್ತು 10 ವರ್ಷ ಸೇವೆಯಲ್ಲಿರುವ ನೌಕರರು (ಎ.ಬಿ.ಸಿ.ಡಿ ದರ್ಜೆ ವಾರು) ಮೃತಪಟ್ಟಲ್ಲಿ ಸರ್ಕಾರದಿಂದ ಸಿಗುವ ಗರಿಷ್ಠ ಆರ್ಥಿಕ ಸೌಲಭ್ಯಗಳ ಮಾಹಿತಿಯನ್ನು ಅನುಬಂಧ–ಈ ರಲ್ಲಿ ನೀಡಲಾಗಿದೆ. |

ಸಂಖ್ಯೆ: ಒಇ 51 ಪಿಇಜಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

# ಅನುಬಂಧ – ಅ

| SL. NO. | GROUP | SANCTIONED STRENGTH | ACTUAL STRENGTH | VACANCY |
|---|---|---|---|---|
| 1 | A | 854 | 760 | 94 |
| 2 | B | 1585 | 1489 | 96 |
| 3 | C | 103421 | 90730 | 12691 |
| 4 | D | 2552 | 1475 | 1077 |
| 5 | TECHNICAL | 873 | 309 | 564 |
| 6 | CONTRACT | 229 | 76 | 153 |
| | **TOTAL** | **109514** | **94739** | **14713** |

# ಅನುಬಂಧ – ಆ

| SL. NO | RANK | SANCTIONED STRENGTH | ACTUAL STRENGTH | VACANCY |
|---|---|---|---|---|
| 1 | FDA | 768 | 749 | 19 |
| 2 | SDA | 933 | 901 | 32 |
| 3 | DALAYATH | 390 | 389 | 1 |
| 4 | SWEEPER | 175 | 159 | 16 |
| | **TOTAL** | **2266** | **2198** | **68** |

## ಅನುಬಂಧ – ಇ

ಅನುಕಂಪದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಂಖ್ಯಾ ಬಲದ ಮಾಹಿತಿ

| SL. NO. | RANK | WORKING STRENGTH OF MINISTRIAL STAFF APPOINTED ON COMPASSIONATE GROUNDS |
|---|---|---|
| 1 | FDA | 709 |
| 2 | SDA | 901 |
| 3 | DALAYATH | 389 |
| 4 | SWEEPER | 159 |
| | **TOTAL** | **2158** |

# ಅನುಬಂಧ – ಈ

ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಗಳು–2002ರ ಉಪ ನಿಯಮ–5(1) ರಲ್ಲಿ ಸರ್ಕಾರಿ ನೌಕರನ ಮರಣದ ದಿನಾಂಕದಂದು ಇದ್ದಂತೆ 01 ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಯವರೆಗೆ ನಿರಂತರ ಸೇವೆಯನ್ನು ಸಲ್ಲಿಸಿಲ್ಲದಿರಬಹುದಾಗಿದ್ದಾಗ್ಯೂ, ಈ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಅವನ ಕುಟಂಬವು ಕುಟುಂಬ ನಿವೃತ್ತಿ ವೇತನವನ್ನು ಪಡೆಯಲು ಅರ್ಹವಾಗಿರತಕ್ಕದೆಂದು ನಿಯಮವಿರುತ್ತದೆ.

07 ವರ್ಷಗಳಿಗಿಂತ ಕಡಿಮೆಯಿಲ್ಲದ ವಾಸ್ತವಿಕ ಅರ್ಹತಾ ಸೇವೆಯನ್ನು ಸಲ್ಲಿಸಿದ ಸರ್ಕಾರಿ ನೌಕರನು ಸೇವೆಯಲ್ಲಿದ್ದಾಗ ಮರಣ ಹೊಂದಿದರೆ ಅವನ/ಅವಳ ಕುಟುಂಬದ ಅರ್ಹ ಸದಸ್ಯನು ಕೊನೆಯದಾಗಿ ಡ್ರಾ ಮಾಡಿದ ವೇತನದ ಶೇ. 50ಕ್ಕೆ ಸಮನಾದ ಹೆಚ್ಚಿಸಿದ ದರದಲ್ಲಿ ಅಥವಾ ಸಾಮಾನ್ಯವಾಗಿ ಅಂಗೀಕಾರಾರ್ಹವಾದ ಕುಟುಂಬ ನಿವೃತ್ತಿ ವೇತನದ ಎರಡು ಪಟ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟನ್ನು 7 ವರ್ಷಗಳ ಅವಧಿಯವರೆಗೆ ಅಥವಾ ಸರ್ಕಾರಿ ನೌಕರನು ಬದುಕಿದ್ದಿದ್ದರೆ ಅವನಿಗೆ 65 ವರ್ಷ ವಯಸ್ಸು ಯಾವ ದಿನಾಂಕದಂದು ತುಂಬುತ್ತಿತ್ತೋ ಆ ದಿನಾಂಕದವರೆಗೆ ಇಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕುಟುಂಬ ಪಿಂಚಣಿ ಸಂದಾಯ ಮಾಡತಕ್ಕದೆಂದು ನಿಯಮವಿರುತ್ತದೆ.

ಕೆ.ಸಿ.ಎಸ್.ಆರ್ ನಿಯಮ–292(ಎ) ರನ್ವಯ 5 ವರ್ಷಗಳ ಅರ್ಹದಾಯಕ ಸೇವೆಯನ್ನು ಪೂರ್ಣಗೊಳಿಸುವುದಕ್ಕೆ ಮುಂಚೆ ಸರ್ಕಾರಿ ನೌಕರನು ಮೃತಪಟ್ಟರೆ, ಮೃತ ಸರ್ಕಾರಿ ನೌಕರನ ಕುಟುಂಬವು ಅವನ ಮರಣ ಕಾಲದ ಉಪಲಬ್ಧಗಳ ಆರರಷ್ಟಕ್ಕೆ ಸಮನಾದ ಉಪದಾನವನ್ನು ಸ್ವೀಕರಿಸಲು ಅರ್ಹವಾಗತಕ್ಕದು. ಆದರೆ ಸೇವೆಯ ಮೊದಲನೇಯ ವರ್ಷದಲ್ಲಿ ಸಂಭವಿಸುವ ಮರಣ ಬಗ್ಗೆ ದೊರೆಯುವ ಉಪದಾನವು 02 ತಿಂಗಳ ಉಪಲಬ್ದಗಳಿಗೆ ಸಮನಾಗಿರತಕ್ಕುದೆಂದು ನಿಯಮವಿರುತ್ತದೆ.

| ಕ್ರ ಸಂ | ಅರ್ಹತಾ ಸೇವಾ ಅವಧಿ | ಉಪದಾನದ ದರ |
|---|---|---|
| 1 | 01 ವರ್ಷಕ್ಕಿಂತ ಕಡಿಮೆ | ಒಟ್ಟು ಉಪಲಬ್ಧಗಳ 2ರಷ್ಟು |
| 2 | 01 ವರ್ಷ ಅಥವಾ ಅದಕ್ಕಿಂತ ಹೆಚ್ಚು ಆದರೆ 5 ವರ್ಷಗಳಿಗಿಂತ ಕಡಿಮೆ | ಒಟ್ಟು ಉಪಲಬ್ಧಗಳ 6ರಷ್ಟು |
| 3 | 05 ವರ್ಷ ಅಥವಾ ಅದಕ್ಕಿಂತ ಹೆಚ್ಚು ಆದರೆ 20 ವರ್ಷಗಳಿಗಿಂತ ಕಡಿಮೆ | ಒಟ್ಟು ಉಪಲಬ್ಧಗಳ 12ರಷ್ಟು |

ದಿವಂಗತರು ಮರಣ ಹೊಂದಿದ ಸಮಯದಲ್ಲಿ ಅವರ ಹಕ್ಕಿನಲ್ಲಿರುವ ಗಳಿಕೆ ರಜೆ ನಗದೀಕರಣ ಸೌಲಭ್ಯ, ಗ್ರೂಪ್–ಎ.ಬಿ.ಸಿ.ಡಿ ಗೆ ಅನುಗುಣವಾಗಿ ಇ.ಜಿ.ಐ.ಎಸ್ ಮೊತ್ತಕ್ಕೆ ಮೃತರ ಕುಟುಂಬದವರು ಅರ್ಹರಿರುತ್ತಾರ.